**APRIL 5, 2025**
**ALL INDIA RADIO- DHARWAD**
**PRADESH SAMACHARA (KANNADA) 12PM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವವರು: ವಿವೇಕಾದಿತ್ಯ ಕನಿಯಾಲ**

<><><>

**ಕೇಂದ್ರ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ** ಸಚಿವಾಲಯ, 7ನೇ ಆವೃತ್ತಿಯ, ಪೋ ´ಣ್ ಮಾಹ್ ಅಥವಾ ಪಖ್ವಾಡಾ, ಇದೇ 8 ರಿಂದ 23ನೇ ತಾರೀಖಿನ ವರೆಗೆ, ದೇಶಾದ್ಯಂತ 15 ದಿನಗಳ ಕಾಲ ಆಯೋಜಿಸಿದೆ. ಅಭಿಯಾನದ ಪೂರ್ವ ಸಿದ್ಧತೆ ಹಾಗೂ ಉದ್ದೇಶದ ಕುರಿತು, ಬೆಳಗಾವಿ ಜಿಲ್ಲೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಪ ನಿರ್ದೇಶಕ, ನಾಗರಾಜ ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

**ಬೈಟ್: ನಾಗರಾಜ 35 ಸೆಕೆಂದುಗಳು**

<><><>

**ಇಂದು, ದೇಶದ ಹಸಿರು ಕ್ರಾಂತಿಯ ಹರಿಕಾರ,** ಮಾಜಿ ಉಪ ಪ್ರಧಾನಿ ಡಾಕ್ಟರ್ ಬಾಬು ಜಗಜೀವನ ರಾಂ ಅವರ 118 ನೇ ಜಯಂತಿಯನ್ನು ರಾಜ್ಯದ ವಿವಿಧ ಜಿಲ್ಲಾ ಕೇಂದ್ರಗಳಲ್ಲಿ ಆಚರಿಸಲಾಗುತ್ತಿದೆ. ತಮ್ಮ ಎಕ್ಸ್ ಖಾತೆ ಮೂಲಕ ಡಾಕ್ಟರ್ ಬಾಬು ಜಗಜೀವನ್ ರಾಂ ರವರ ಕೊಡುಗೆಗಳನ್ನು ಸ್ಮರಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಮನಗಳನ್ನು ಸಲ್ಲಿಸಿದ್ದಾರೆ.

<><><>

**ಧಾರವಾಡ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್,** ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿತ ಡಾಕ್ಟರ ಬಾಬು ಜಗಜೀವನ ರಾಂ ಜಯಂತಿ ಕಾರ್ಯಕ್ರಮವು ಕರ್ನಾಟಕ ವಿದ್ಯಾವರ್ಧಕ ಸಂಘದ ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ ಪ್ರಗತಿಯಲ್ಲಿದೆ. ಇಂದು ಬೆಳಗ್ಗೆ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಡಾಕ್ಟರ್ ಬಾಬು ಜಗಜೀವನ ರಾಂ ಅವರ ಭಾವಚಿತ್ರಕ್ಕೆ ಜಿಲ್ಲಾಧಿಕಾರಿ ದಿವ್ಯಾ ಪ್ರಭು ಅವರು ಪುಷ್ಪ ನಮನ ಸಲ್ಲಿಸಿದರು. ಬಳಿಕ ಭಾವಚಿತ್ರವನ್ನು ವಿವಿಧ ಕಲಾತಂಡಗಳೊಂದಿಗೆ, ಮೆರವಣಿಗೆ ಮೂಲಕ, ಪಾಟೀಲ ಪುಟ್ಟಪ್ಪ ಸಭಾಭವನಕ್ಕೆ ತರಲಾಯಿತು.

<><><>

**ಮಂಡ್ಯದಲ್ಲಿ ವಿವಿಧ ಇಲಾಖೆಗಳ** ಸಹಯೋಗದಲ್ಲಿ ಜರುಗಿದ ಡಾಕ್ಟರ್ ಬಾಬು ಜಗಜೀವನ್ ರಾಂ ಜಯಂತಿ ಅಂಗವಾಗಿ, ಜಿಲ್ಲಾಧಿಕಾರಿ ಡಾಕ್ಟರ್ ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಸೇರಿದಂತೆ ಗಣ್ಯರು, ಬಾಬು ಜಗಜೀವನ ರಾಂ ಹಾಗೂ ಡಾಕ್ಟರ್ ಬಿ.ಆರ್ ಅಂಬೇಡ್ಕರ್ ಪುತ್ಥಳಿಗಳಿಗೆ ಮಾಲಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿದರು.

<><><>

**ಕಲ್ಯಾಣ ಚಾಲುಕ್ಯರಿಂದ** ನಿರ್ಮಾಣವಾದ ಹುಬ್ಬಳ್ಳಿಯ ಉಣಕಲ್ ನ ಚಂದ್ರಮೌಳೇಶ್ವರ ದೇವಸ್ಥಾನವನ್ನು ಐತಿಹಾಸಿಕ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ, ರಾಜ್ಯ ಸರ್ಕಾರವು ಕ್ರಮ ಕೈಗೊಂಡು ಪ್ರವಾಸೋದ್ಯಮಕ್ಕೆ ಹೆಚ್ಚಿನ ಉತ್ತೇಜನ ನೀಡಬೇಕು ಎಂದು ಹುಬ್ಬಳ್ಳಿ–ಧಾರವಾಡ ಸೆಂಟ್ರಲ್ ವಿಧಾನಸಭಾ ಕ್ಷೇತ್ರದ ಶಾಸಕ ಮಹೇಶ ಟೆಂಗಿನಕಾಯಿ ಹೇಳಿದ್ದಾರೆ. ಈ ಬಗ್ಗೆ ತಮ್ಮ ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ವಿಧಾನಸಭಾ ಅಧಿವೇಶನದಲ್ಲಿ, ಹುಬ್ಬಳ್ಳಿ ಧಾರವಾಡ ಪ್ರವಾಸೋದ್ಯಮದ ಕುರಿತು ಸದನದ ಗಮನ ಸೆಳೆಯಲಾಗಿದೆ, ಬಾಲಿವುಡ್ ನಟಿ ಸಾರಾ ಅಲಿಖಾನ್ ಚಂದ್ರಮೌಳೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿದ್ದು ಸಂತಸದ ವಿ  ʼಯವಾಗಿದೆ ಎಂದಿದ್ದಾರೆ.

<><><>

**ಧಾರವಾಡ ಜಿಲ್ಲೆಯಲ್ಲಿ, ವಿದ್ಯಾಕಾಶಿ** ಯೋಜನೆಯಡಿ ಈ ಬಾರಿ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಸುಧಾರಣೆಗೆ ವಿಶೇಷ ಗಮನ ನೀಡಲಾಗಿದ್ದು, ಫಲಿತಾಂಶದಲ್ಲಿ ಧಾರವಾಡ ಜಿಲ್ಲೆಯು, ಮೊದಲು 10 ಸ್ಥಾನದಲ್ಲಿರಲಿದೆ ಎಂದು ಜಿಲ್ಲಾಧಿಕಾರಿ ದಿವ್ಯಾ ಪ್ರಭು ಭರವಸೆ ವ್ಯಕ್ತಪಡಿಸಿದರು. ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಗಳು ನಿನ್ನೆ ಮುಕ್ತಾಯಗೊಂಡ ಹಿನ್ನೆಲೆ, ಧಾರವಾಡ ತಾಲೂಕಿನ ಅಳ್ನಾವರ ವಿಲ್ಲರ್ ಉರ್ದು ಪ್ರೌಢಶಾಲೆ ಹಾಗೂ ಇನ್.ಇ.ಎಸ್ ಪ್ರೌಢಶಾಲೆಗಳ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ, ಅವರು ಪರಿಶೀಲಿಸಿದರು. ಪರೀಕ್ಷೆ ಬರೆದ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ ಅವರು ವಿದ್ಯಾರ್ಥಿಗಳನ್ನು ಅಭಿನಂದಿಸಿದರು. ಒಟ್ಟು 28 ಸಾವಿರದ 666 ನೋಂದಾಯಿತ ವಿದ್ಯಾರ್ಥಿಗಳಲ್ಲಿ, ಶೇಕಡ 98 ದಶಾಂಶ 2,7 ರಷ್ಟು ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ ಎಂದರು.

<><><>

**ರಕ್ಷಣಾ ಸಂಸ್ಥೆಯ ಆರ್ಥಿಕ ವಿನ್ಯಾಸದಲ್ಲಿ** ನಾವಿನ್ಯತೆ, ದತ್ತಾಂಶ ಆಧರಿಸಿ, ವಿನಿಯೋಗ ಕಾರ್ಯತಂತ್ರವನ್ನು ಬಲಪಡಿಸುವ ದೃಢ ಸಂಕಲ್ಪದೊಂದಿಗೆ, ಹಂಪಿಯಲ್ಲಿ ಆಯೋಜಿಸಿದ್ದ, ಎರಡು ದಿನಗಳ, ಸಮಗ್ರ ಹಣಕಾಸು ಸಲಹೆಗಾರರ ಸಮ್ಮೇಳನ, ಸಮಾರೋಪಗೊಂಡಿತು. ದೇಶದ ವಿವಿಧ ಭಾಗಗಳಿಂದ ಆಗಮಿಸಿದ್ದ, ಹಣಕಾಸು ತಜ್ಞರು, ರಕ್ಷಣಾ ಇಲಾಖೆಯ ಹಣಕಾಸು ನಿರ್ವಹಣೆಯ ಕುರಿತಂತೆ, ಚರ್ಚಿಸಿದರು.

<><><>

**ಬೆಳಗಾವಿ ಜಿಲ್ಲೆಯ, ಎಲ್ಲ ಗ್ರಾಮ ಪಂಚಾಯಿತಿಗಳು** ಹಾಗೂ ಹೋಬಳಿ ಮಟ್ಟದಲ್ಲಿ, ಹವಾಮಾನ ಮತ್ತು ಮಳೆ ಮಾಪನ ಉಪಕರಣ ಅಳವಡಿಸಿದರೆ, ರೈತರಿಗೆ ಉಪಯುಕ್ತ, ಸಕಾಲಿಕ ಮಾಹಿತಿ ದೊರೆತು, ಬೆಳೆ ನಿರ್ಧರಿಸಲು ಅನುಕೂಲವಾಗುತ್ತದೆ ಎಂದು, ಬೆಳಗಾವಿ ಸಂಸದ ಜಗದೀಶ ಶೆಟ್ಟರ್, ಕೇಂದ್ರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಖಾತೆ ಸಚಿವ, ಶಿವರಾಜ್‌ಸಿಂಗ್ ಚೌವ್ಹಾಣ್ ಅವರಿಗೆ, ಮನವಿ ಮಾಡಿದ್ದಾರೆ.ಹೊಸ ದಿಲ್ಲಿಯ ಸಂಸತ್ ಭವನದಲ್ಲಿ, ಸಚಿವರೊಂದಿಗೆ ಅವರು ಸಮಾಲೋಚಿಸಿದರು.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**

<><><>